ತ್ತಿರುವ ಬಾಡಿಗೆಗಿಂತ ದ್ವಿಗುಣವಾಗಿ ಕೊಡುತ್ತೇವೆಂದು ಕಾಗದದಲ್ಲಿ ಬರೆದು ಕೊಟ್ಟಿದ್ದಾರೆ. ಆದರೂ ಕೂಡ ಇವರನ್ನು ಹೊರಗೆ ಎತ್ತಿ ಹಾಕಿದ್ದಾರೆ, ಅದು ಕೋರ್ಟ್‌ಗೆ ತಲುಪಿದೆ. ಮೂರನೆಯದಾಗಿ ಟೆಂಡರ್‌ಗಳನ್ನು ಕರೆದು ಸಾಮಾನುಗಳನ್ನು ಸಪ್ಲೈ ಮಾಡುವುದಕ್ಕೆ ತಿಳಿಸಿದ್ದಾರೆ. ಇದರಲ್ಲಿ ಅನೇಕ ಬೋಗಸ್ ಸೊಸೈಟಿಗಳು ಬರುತ್ತದೆ. ಇದು ವ್ಯಕ್ತಿ ಟೆಂಡರ್ ಆಗುತ್ತಿದೆಯೇ ಹೊರತು ಸೊಸೈಟಿ ಟೆಂಡರ್ ಅಲ್ಲ ಆದಾಗ್ಯೂ ಕೂಡ ಒಂದು ಟೆಂಡರ್ ಇರಬೇಕಾದರೆ ಹತ್ತಾರು ವರ್ಷಗಳಿಂದ ಒಬ್ಬರಿಂದಲೇ ಸಾಮಾನುಗಳು ಸಪ್ಲೈ ಆಗುತ್ತಿದೆ. ಇದಕ್ಕೆ ಪರಿಹಾರ ಹುಡುಕಲಿಕ್ಕೆ ಸರ್ಕಾರ ಪ್ರಯತ್ನ ಮಾಡಿದೆಯೇ? ಇದರಲ್ಲಿ ಎಷ್ಟು ಅನ್ಯಾಯ ನಡೆದಿದೆ ಎನ್ನುವುದನ್ನು ಸರ್ಕಾರ...

ಅಧ್ಯಕ್ಷರು. — ಸಪ್ಲಿಮೆಂಟರಿ ಕೇಳಿ.

ಶ್ರೀ ಬಿ. ರಾಚಯ್ಯ — ಪರಿಶೀಲಿಸಲಾಗುತ್ತದೆ ಎಂದು ಹೇಳಿದ್ದೇನೆ. ಬಹುಶ: ಇದಕ್ಕೆ ಏಪ್ರಿಲ್ ತಿಂಗಳಿನಲ್ಲಿ ಉತ್ತರ ಸಿಗುತ್ತದೆಂದು ಕಾಣುತ್ತದೆ.

ಶ್ರೀ ಪಿ.ಎಂ. ಚಿಕ್ಕಬೋರಯ್ಯ.— ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆಯಲ್ಲಿ ಕಾಲು ಭಾಗ ಮಾತ್ರ ಆಚ್ಚಾಗಿ ಬಂದಿದೆ, ಮುಕ್ಕಾಲು ಭಾಗ ಡಿಲಿಟ್ ಆಗಿದೆ, ಇದಕ್ಕೆ ಕಾರಣ ಏನು ಎಂದು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಂದು ತಿಳಿದಿದ್ದೇನೆ.

ಶ್ರೀ ಬಿ. ರಾಚಯ್ಯ.— ಕೋರ್ಟಿಗೆ ಹೋಗಿರುವ ವಿಷಯದಲ್ಲಿ ಏನು ತೀರ್ಮಾನವಾಗುತ್ತದೆ ಎಂಬ ಬಗ್ಗೆ ನಿರೀಕ್ಷೆ ಮಾಡುತ್ತಿದ್ದೇವೆ. ಎರಡನೆಯದಾಗಿ ಈಗ ಹೋಟೆಲ್ ನಡೆಸುತ್ತಾ ಇರುವವರಲ್ಲಿ ಹೈಯೆಸ್ಟ್ ಬಿಡ್ಡರ್ ಬಂದಿದ್ದಾರೆ. ಆದರೂ ಕೂಡ ನಾವು ತೀರ್ಮಾನ ತೆಗೆದು ಕೊಂಡಿಲ್ಲ. ಬೇರೆ ಯಾರು ಯಾರು ಟೆಂಡರ್ ಹಾಕಿದ್ದಾರೆ ಎಂದು ವಿವರವನ್ನು ಕೇಳಿದ್ದೇವೆ. ವಿವರ ಬಂದ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಜಮಖಂಡಿಯಲ್ಲಿ ಅರಣ್ಯ ಇಲಾಖೆಯ ವಿಶ್ರಾಂತಿ ಧಾಮದ ನಿರ್ಮಾಣ

೪೫೧. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬಿಳಗಿ).— ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಮಖಂಡಿಯ ಕಟ್ಟೆಕೆರೆಯಮಗ್ಗುಲಲ್ಲಿರುವ ಗುಡ್ಡದ ಮೇಲೆ ಅರಣ್ಯ ಇಲಾಖೆಯ ವಿಶ್ರಾಂತಿ ಧಾಮದ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರೆಯುತ್ತಿರುವುದು ನಿಜವೆ ;

ಆ) ಹಾಗಿದ್ದಲ್ಲಿ ಈ ವಿಶ್ರಾಂತಿ ಧಾಮದ ಅಂದಾಜು ವೆಚ್ಚವೆಷ್ಟು ;

ಇ) ಈ ವಿಶ್ರಾಂತಿಧಾಮದ ನಿರ್ಮಾಣ ಕಾರ್ಯ ಕಳೆದ ೬ ತಿಂಗಳಿನಿಂದ ನಿಂತು ಹೋದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ನಿರ್ಮಾಣದ ಕೆಲಸವನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ;

ಉ) ಹಾಗಿದ್ದಲ್ಲಿ ಅದರ ನಿರ್ಮಾಣ ಕಾರ್ಯವನ್ನು ಯಾವಾಗ ಪುನರಾರಂಭ ಮಾಡಲಾಗುವುದು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಹೌದು

ಆ) ರೂ. ೪.೮೦ ಲಕ್ಷಗಳು

ಇ) ಇಲ್ಲ

ಈ) ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಜಮಖಂಡಿಯ ಕಟ್ಟೆ ಕೆರೆಯ ಪಕ್ಕದಲ್ಲಿರುವ ಗುಡ್ಡದ ಮೇಲೆ ಅರಣ್ಯ ಇಲಾಖೆಯ ವಿಶ್ರಾಂತಿಧಾಮದ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದೆ ಎಂದು ಹೇಳಿದ್ದಾರೆ. ವಿಶ್ರಾಂತಿ ಧಾಮದ ನಿರ್ಮಾಣದ ವೆಚ್ಚ ೪.೮೦ ಲಕ್ಷ ರೂಪಾಯಿಗಳಾಗಿದೆ. ಮಾನ್ಯ ಮಂತ್ರಿಗಳು ೫ ಪ್ರಶ್ನೆಗೆ ಉತ್ತರಿಸುತ್ತಾ ನಿರ್ಮಾಣದ ಕೆಲಸವನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಲಾಗಿದೆ ಎನ್ನುವ

ವಾತನ್ನು ಹೇಳಿದ್ದಾರೆ. ಮೊದಲನೆಯದಾಗಿ, ಇದು ಅತ್ಯಂತ ಪ್ರಾರ್ಥವಾದಂಥ ಎತ್ತರವಾದ ಸ್ಥಳದಲ್ಲಿದೆ. ಈ ವಿಶ್ರಾಂತಿಧಾಮ ನಿರ್ಮಾಣವಾದರೆ ನಾಳೆ ಅಲ್ಲಿಗೆ ಶ್ರೀಮಂತರು ಮಾತ್ರ ಹೋಗುವುದಕ್ಕಾಗುತ್ತದೆ. ನನ್ನಂತೆ ಸೈಕಲ್ ಇರುವಂಥ ಜನಸಾಮಾನ್ಯರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಿಲ್ಲ ಈ ಸ್ಥಳವನ್ನು ಪರಿಶೀಲನೆ ಮಾಡುವುದಕ್ಕೆ ಇಲಾಖೆಯ ಅಧಿಕಾರಿಗಳು ಹೋಗಿದ್ದರೆ ? ಹಿಂದೆ ಮಾನ್ಯ ಬಾಗಲಕೋಟೆಯವರು ಅರಣ್ಯ ಖಾತೆಯ ಮಂತ್ರಿಗಳಾಗಿದ್ದಾಗ ಒಂದು ಸಮಾರಂಭ ಮಾಡಿದರು. ಒಂದು ವರ್ಷದಿಂದ ಆದರ ಕಾರ್ಯ ಸ್ಥಗಿತವಾಗಿದೆ ಇತ್ತೀಚೆಗೆ ಆದರ ಚಟುವಟಿಕೆ ಶುರುವಾಗಿದೆ ಕರ್ನಾಟಕ ಭೂಸೇನಾ ನಿಗಮಕ್ಕೆ ವಿಶ್ರಾಂತಿಧಾಮದ ನಿರ್ಮಾಣದ ಕೆಲಸವನ್ನು ನಿರ್ದಿಷ್ಟವಾದ ಅವಧಿಯಲ್ಲಿ ಮುಗಿಸಲಿಕ್ಕೆ ಕಟ್ಟುನಿಟ್ಟಾದ ಸೂಚನೆಯನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ — ಈಗಾಗಲೇ ೨ ಲಕ್ಷ ಬಿಡುಗಡೆಯಾಗಿದೆ. ಆದಷ್ಟು ಮುಂದಿನ ಏಪ್ರಿಲ್‌ನಲ್ಲಿ ಕೂಡ ಅದಕ್ಕೆ ಬೇಕಾದಂಥ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಷ್ಟು ಬೇಗ ಸಾಧ್ಯವಾಗುತ್ತೋ ಅಷ್ಟು ಬೇಗ ಮುಗಿಸುವುದಕ್ಕೆ ಅವರಿಗೆ ಆದೇಶ ಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಬಾಗಲಕೋಟೆಯವರು ಅರಣ್ಯ ಸಚಿವರಾಗಿದ್ದಾಗ ಅಲ್ಲಿ ಅತ್ಯುತ್ತಮ ಸಸ್ಯ ಕ್ಷೇತ್ರವನ್ನು ಬೆಳೆಸಬೇಕು, ಚಿಗರೆವನ ಮಾಡಬೇಕೆಂದಿದ್ದರು. ಜಮಖಂಡಿಯಲ್ಲಿ ಬೇರೆ ಯಾವುದೇ ಜಾಗವಿಲ್ಲ. ಆದ್ದರಿಂದ ಇಲ್ಲಿ ಹೀಗೆ ಅಭಿವೃದ್ಧಿ ಕೆಲಸವನ್ನು ಮಾಡಲಿಕ್ಕೆ ಹೆಚ್ಚಿನ ಹಣವನ್ನು ಸನ್ಮಾನ್ಯ ಸಚಿವರು ಒದಗಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.— ಏಪ್ರಿಲ್ ತಿಂಗಳಲ್ಲಿ ಹೊಸದಾಗಿ ಬರತಕ್ಕಂಥ ಹಣ ಏನಿದೆ ಅದರಲ್ಲಿ ಬಿಡುಗಡೆ ಮಾಡುತ್ತೇನೆಂದು ಹೇಳಿದ್ದೇನೆ. ಈ ವರ್ಷ ೨ ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ. ೪.೮೦ ಲಕ್ಷ ರೂಪಾಯಿಗಳಷ್ಟನ್ನು ಪೂರ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಆರ್. ಎಂ. ಸಾಟೀಲರ ನಿಮ್ಮ ೪೭೩ನೇ ಪ್ರಶ್ನೆಗೆ ಮಂತ್ರಿಗಳು ವೇಳೆಯನ್ನು ಕೇಳಿದ್ದಾರೆ.

ಶಿಕಾರಿಪುರ ತಾಲ್ಲೂಕಿನ ಉಪಾಧ್ಯಾಯರಿಗೆ ಸಂಬಳ ನೀಡದಿರುವುದು

೪೭೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿರಿ ?

ಅ) ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪದಲ್ಲಿನ ಶ್ರೀ ಮಾರುತಿ ಪ್ರೌಢಶಾಲೆ ಉಪಾಧ್ಯಾಯರಿಗೆ ಎಷ್ಟು ತಿಂಗಳುಗಳಿಂದ ಸಂಬಳ ನೀಡಿರುವುದಿಲ್ಲ;

ಆ) ಹಾಗಿದ್ದಲ್ಲಿ ಅವರಿಗೆ ಯಾವಾಗ ಸಂಬಳ ನೀಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೧೯೮೮ನೇ ಅಕ್ಟೋಬರ್ ತಿಂಗಳಿಂದ ಈ ಶಾಲೆಯ ಮೂಲ ವೇತನ ಬಿಲ್ಲುಗಳನ್ನು ಮೇಲು ಸಹಿ ಮಾಡಿರುವುದಿಲ್ಲ. ಕಾರಣ ೧೯೮೮ನೇ ಅಕ್ಟೋಬರ್‌ನಿಂದ ವೇತನ ಬಿಲ್ಲುಗಳು ಸದರಿ ಶಾಲೆಯಿಂದ ಈ ಕಛೇರಿಗೆ ಬಂದಿರುವುದಿಲ್ಲ.

ಆ) ಈ ಕೆಳಕಾಣಿಸಿರುವ ವಿಷಯಗಳು ನಿರ್ಮಾನವಾದೊಡನೆ ಸಂಬಳವನ್ನು ಬಿಡುಗಡೆ ಮಾಡಲಾಗುವುದು.

೧) ಪ್ರಭಾರ ಮುಖ್ಯ ಶಿಕ್ಷಕರು ಯಾರು ? ಎಂಬುದು ಅಂತಿಮವಾಗಿ ಇತ್ಯರ್ಥವಾಗಬೇಕು.

೨) ಅನುದಾನ ಸಂಹಿತೆಯ ಸಾಮಾನ್ಯ ನಿಯಮಗಳ ಪಾಲನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ಈ ಶಾಲೆ ಎಸ್.ಸಿ. ಎಸ್.ಟಿ.ಯವರ ಮ್ಯಾನೇಜಮೆಂಟ್‌ನಲ್ಲಿ ನಡೆಯುತ್ತಿದೆ. ಈ ಶಾಲೆಯಲ್ಲಿ ಕಳೆದ ಅನೇಕ ತಿಂಗಳುಗಳಿಂದ ಮ್ಯಾನೇಜ್‌ಮೆಂಟ್ ಉದ್ದೇಶಪೂರ್ವಕವಾಗಿ ಕಿರುಕುಳ ಕೊಡುತ್ತಾ ಇದೆ, ಉಪಾಧ್ಯಾಯರಿಗೆ ಸಂಬಳ ಕೊಡುತ್ತಾ ಇಲ್ಲ. ಬಿಲ್ಲಿಗೆ ಸಹಿ ಕೊಡದೇ ಇದ್ದುದರಿಂದ ಬೇಗ ಹಾಕಿದ್ದರು. ನಂತರ ಶಾಲಾ ಉಪಾಧ್ಯಾಯರೇ ಬಾಡಿಗೆ ಕಟ್ಟಿ ಶಾಲೆಯ ಬೀಗ ತೆಗೆಸಿದ್ದಾರೆ. ಪ್ರಭಾರ ಮುಖ್ಯ ಶಿಕ್ಷಕರು ಯಾರು